ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯಾದ ರೂಪದಲ್ಲಿ ಒಪ್ಪಿಗೆ ನೀಡಲಾಯಿತು

1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೆ ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಮುಖ್ಯಮಂತ್ರಿಗಳ ಪರವಾಗಿ ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ವಿಧೇಯಕದ ಸಾರಾಂಶ ಏನಿದೆಯೆಂದರೆ, ಮಾರಾಟ ತೆರಿಗೆ ಅಧಿಕಾರ ವರ್ಗದವರು, ಆಸೆಸಿಂಗ್ ಅಥಾರಿಟಿ, ತೆರಿಗೆಯನ್ನು ವಸೂಲು ಮಾಡತಕ್ಕಂತಹ ಅಧಿಕಾರವರ್ಗದವರು ಈ ಪ್ರವೇಶ ತೆರಿಗೆಯ ವಸೂಲು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಎನ್ನುವ ಕಲಮನ್ನು ಸೇರಿಸುವುದು ಮೊದಲನೇ ಭಾಗ. ಎರಡನೆಯದು, ರಾಷ್ಟ್ರದ ನಮ್ಮ ಡಿಫೆನ್ಸ್ ಯುನಿಟ್ಸ್ ರಾಷ್ಟ್ರದ ರಕ್ಷಣಾ ಕೇಂದ್ರಗಳಿಗೆ ಈ ಪ್ರವೇಶ ತೆರಿಗೆ ಯಾವುದೂ ಅನ್ವಯಿಸಬಾರದು ಎಂದು ಅವರಿಗೆ ಮನ್ನಾ ಮಾಡತಕ್ಕದ್ದು 2ನೇ ಭಾಗ. ಈ 72 ವಸ್ತುಗಳ ಮೇಲೆ ಪ್ರವೇಶ ತೆರಿಗೆಯನ್ನು ರದ್ದು ಮಾಡುವುದರಿಂದ ಆಗಬಹುದಾದಂತಹ ಕೆಲವು ಬದಲಾವಣೆಗಳನ್ನು ಇದರಲ್ಲಿ ಆಳವಡಿಸಲಾಗಿದೆ. ಮತ್ತು ಇನ್ನೂ ಕೆಲವು ದೋಷಗಳು ಹಿಂದಿನ ಕಾನೂನಿನಲ್ಲಿ ಇತ್ತು. ಅದನ್ನು ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿತರಕ್ಕಂತಹ ಅಂಶಗಳಲ್ಲಿ ಇದನ್ನು ನ್ಯಾಯಬದ್ಧ ಮಾಡುವುದಕ್ಕೋಸ್ಕರವಾಗಿ ಕೆಲವು ತಿದ್ದುಪಡಿಗಳನ್ನು ಸೂಚನೆ ಮಾಡಲಾಗಿದೆ. ಈ ವಿಧೇಯಕ ಮಾರಾಟ ತೆರಿಗೆ ವಿಧೇಯಕದ ಒಂದು ಭಾಗವಾಗಿದೆ. ಅದನ್ನು ಸಫಲವಾಗಿ ಆಚರಣೆಗೆ ತರುವುದಕ್ಕೋಸ್ಕರ ಈ ವಿಧೇಯಕವರನ್ನು ತರಲಾಗಿದೆ. ಆದ್ದರಿಂದ ಈ ಮಾನ್ಯ ಸಭೆ ಇದನ್ನು ಒಪ್ಪಬೇಕು ಎಂದು ಕೇಳಿ ಕೊಳ್ಳುತ್ತೇನೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಸರಕುಗಳ ಮೇಲಣ ತೆರಿಗೆಯ ತಿದ್ದುಪಡಿ ವಿಧೇಯಕ ಏನಿದೆ, ಈ ವಿಧೇಯಕಕ್ಕೆ ಕೆಲವು ತಾಂತ್ರಿಕವಾದಂತಹ ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆ. ಯಾವ ತಾಂತ್ರಿಕವಾದಂತಹ ತಿದ್ದುಪಡಿಗಳನ್ನು ತಂದಿದ್ದಾರೆ ಅವುಗಳಿಗೆ ನಮ್ಮ ಆಕ್ಷೇಪ ಇಲ್ಲ. ಮತ್ತೊಂದು ರಕ್ಷಣಾ ದಳದ ಮತ್ತು ರಕ್ಷಣಾ ದಳಕ್ಕೆ ಸಂಬಂಧಿಸಿದ ಸರಕುಗಳ ತಯಾರಿಕೆ, ದುರಸ್ತಿ ಮತ್ತು ಸಂಶೋಧನೆ ಬಗ್ಗೆ ಮತ್ತು ಅಭಿವೃದ್ಧಿಯಲ್ಲಿ ಏನು ಅದನ್ನು ಉಪಯೋಗಿಸುತ್ತಿದ್ದಾರೋ ಅಂತಹ ಸರಕುಗಳಿಗೆ ಈ ಒಂದು ಪ್ರವೇಶ ತೆರಿಗೆಯಿಂದ ವಿನಾಯತಿ ಕೇಳಿದ್ದಾರೆ. ಅದಕ್ಕೂ ಸಹ ನಾನು ಆಕ್ಷೇಪವನ್ನು ವ್ಯಕ್ತ ಮಾಡುವುದಿಲ್ಲ. ಆದರೆ ಒಂದು ಪ್ರಕರಣವನ್ನು ಕೈಬಿಟ್ಟಿದ್ದಾರೆ. ಅದು 5 ಸಿ. ಏನೆಂದರೆ, ಕಾಂಪೊಜಿಷನ್ ಆಫ್ ಟ್ಯಾಕ್ಸ್. ಇದರ ಅಡಿಯಲ್ಲಿ ಈವರೆಗೆ ಸುಮಾರು 80

ಸರಕುಗಳು ಇದ್ದವು ಎನ್ನುವ ಮಾತನ್ನು ಹೇಳಿದ್ದಾರೆ. ಆ 80 ಸರಕುಗಳ ಪೈಕಿ 72 ಸರಕುಗಳ ಪ್ರವೇಶ ತೆರಿಗೆಯನ್ನು ನಾವು ಈಗಾಗಲೇ ರದ್ದು ಮಾಡಿರುವುದರಿಂದ ಮತ್ತು ಅದಕ್ಕೆ ಸಂಬಂಧವಾಗಿ ಈ ಹಿಂದೆ ನಾವು ಅನುಮೋದಿಸಲ್ಪಟ್ಟ ಮಾರಾಟ ತೆರಿಗೆ ತಿದ್ದುಪಡಿ ಏನು ಇದೆ, ಅದರ ತಿದ್ದುಪಡಿ ಪ್ರಕರಣಗಳನ್ನು ನಾವು ಪರಿಶೀಲನೆ ಮಾಡಿದಾಗ ಇನ್ನೂ ಕೆಲವು ಸರಕುಗಳ ಮೇಲೆ ಪ್ರವೇಶ ಮೇಲಣ ತೆರಿಗೆಯನ್ನು ಹಾಕುತ್ತಿದ್ದೇವೆ. ಕಾಂಪೊಜಿಷನ್ ಆಫ್ ಟ್ಯಾಕ್ಸ್ ಕೇವಲ ಈ ಒಂದು ವಿಧೇಯಕದ ಈ ಒಂದು ಕಾನೂನಿನಲ್ಲಿ ಮಾತ್ರ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಮಾರಾಟ ತೆರಿಗೆ ಕಾನೂನು ಏನು ನಮ್ಮ ಭಾಗದಲ್ಲಿ ಜಾರಿಯಿದೆ, ಅದರಲ್ಲೂ ಸಹ ಈ ಕಾಂಪೋಜಿಷನ್ ಆಫ್ ಟ್ಯಾಕ್ಸ್‌ಗೆ ಒಂದು ಅವಕಾಶ ಇದೆ. ಅದರ ಮುಖಾಂತರ ನಾವು ಯಾವ ಒಬ್ಬ ತೆರಿಗೆದಾರ ಇದ್ದಾನೆ, ಅವನಿಗೆ ಸಹಾಯ ಮಾಡುವುದಕ್ಕೋಸ್ಕರ ಈ ಎಲ್ಲಾ ತೊಂದರೆಗಳಿಂದ ಹಾಗೂ ಮುಜುಗರಗಳಿಂದ ತಪ್ಪಿಸುವುದಕ್ಕೋಸ್ಕರ ಆತ ಮುಂದೆ ಇಷ್ಟು ಟ್ಯಾಕ್ಸ್ ವ್ಯವಹಾರ ಮಾಡುತ್ತಾನೆ, ಇಷ್ಟು ಟ್ಯಾಕ್ಸ್ ಒಪ್ಪಿಕೊಳ್ಳುತ್ತಾನೆ; ಎಂದುಕೊಂಡು ಈಗ ಮಾರಾಟ ತೆರಿಗೆ ಅಧಿನಿಯಮದಲ್ಲಿ ಏನು ಕಾಂಪೊಜಿಷನ್ ಆಫ್ ಟ್ಯಾಕ್ಸ್ ಇದೆ, ಅದೇ ರೀತಿ ಈ ಒಂದು ಪ್ರವೇಶ ಮೇಲಣ ತೆರಿಗೆಯಲ್ಲಿ ನಾವು ಒಂದು 5ಸಿ ಎಂಬ ಒಂದು ಕಲಂ ಅನ್ನು ಇಟ್ಟುಕೊಂಡು ಈ ಒಂದು ಕಾಂಪೋಜಿಷನ್ ಆಫ್ ಟ್ಯಾಕ್ಸ್‌ಗೆ ಅವಕಾಶ ಕೊಟ್ಟಿದ್ದೆವು. ನಾನು ಕೇಳುವುದು ಇಷ್ಟೇ; ಇದರಿಂದ ಯಾವ ಒಬ್ಬ ತೆರಿಗೆದಾರನಿಗೆ ಎಂದರೆ ಯಾರು ಟ್ಯಾಕ್ಸ್ ಕಟ್ಟಬೇಕಾಗಿತ್ತು ಅವನಿಗೆ ತೊಂದರೆ ಕಡಿಮೆಯಾಗುತ್ತಿತ್ತು. ಅವನು ವರ್ಷಕ್ಕೆ ಇಷ್ಟು ಎಂದು ಹಣವನ್ನು ಕಟ್ಟಿಬಿಡುತ್ತಿದ್ದ. ಇವತ್ತು ನಾವು ಎಂಟ್ರಿ ಟ್ಯಾಕ್ಸ್ ತೆಗೆದು ಹಾಕಿರಬಹುದು. ನಾನು ಹೇಳುತ್ತೇನೆ, ಇವತ್ತಿನ ದಿವಸ ಯಾವ ಎಂಟ್ರಿ ಟ್ಯಾಕ್ಸ್ ನೀವು ಹಾಕಬೇಕು. ಎಂದು ಇಟ್ಟುಕೊಂಡಿದ್ದೀರಿ, ಅದು 5 ಸಿ ಇರಬಹುದು ಅಥವಾ ಬೇರೆಬೇರೆ ಸಂದರ್ಭಗಳಲ್ಲಿದ್ದರೂ ಸಹ, ತಾವು ಹೆಚ್ಚಿನ ತೆರಿಗೆಯನ್ನು ಹಾಕುವಂತಹ ಒಂದು ಪರಿಸ್ಥಿತಿ ಬಂದಾಗಲೂ ಸಹ ಈ ಒಂದು ಕಾಂಪೊಜಿಷನ್ ಆಫ್ ಟ್ಯಾಕ್ಸ್ ಎನ್ನುವಂತಹ ಒಂದು ಪ್ರಕರಣ ಇದ್ದಿದ್ದರೆ ಅದು ಅನುಕೂಲವಾಗುತ್ತಿತ್ತು. ಇವತ್ತಿನ ದಿವಸ ತಾವು ಹೇಳಬಹುದು, ಇಲ್ಲಾ ಇಲ್ಲಾ, ನಾವು ಕೇಳುವುದಿಲ್ಲ, 8 ಸರಕುಗಳ ಮೇಲೆ ಮಾತ್ರ ಇಟ್ಟುಕೊಂಡಿದ್ದೇವೆ, ಅದರಲ್ಲೂ ಸಹ ಕೆಲವನ್ನು ತೆಗೆದಿರುವುದರಿಂದ ಸ್ವಲ್ಪ ಸರಕುಗಳ ಮೇಲೆ ಮಾತ್ರ ನಾವು ಈ ಪ್ರವೇಶ ಮೇಲಣ ತೆರಿಗೆಯನ್ನು ಹಾಕುತ್ತೇವೆ ಎಂದು ; ಅದರಿಂದ ಈ ಒಂದು 5ಸಿ ಏನಿದೆ ಕಾಂಪೊಜಿಷನ್ ಆಫ್ ಟ್ಯಾಕ್ಸ್ ಅನಾವಶ್ಯಕ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಖಂಡಿತವಾಗಲೂ ಸಹ ನಿಮಗೆ ಇದರಿಂದ ಏನು ತೊಂದರೆಯಾಗುತ್ತಿತ್ತು ಎಂದು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇದರಿಂದ ನಿಮಗೆ ಏನೂ ತೊಂದರೆಯಾಗುತ್ತಿರಲಿಲ್ಲ. ಅಥವಾ ಇನ್ನು ಮುಂದೆಯಾದರೂ ಸಹ ತಾವು ಬೇರೆ ಸರಕುಗಳ ಪ್ರವೇಶ ತೆರಿಗೆ ಏನು ಹಾಕುತ್ತಿದ್ದೀರೋ ಅಂತಹ ಸಂದರ್ಭದಲ್ಲಿ ಇಂತಹ ಒಂದು ಪ್ರಕರಣ ಇರುವ ಮುಖಾಂತರ ಅವರಿಗೆ ಹೆಚ್ಚು ಮುಜುಗರ ಆಗದಂತೆ ತೊಂದರೆಯಾಗದಂತೆ ನಿಮ್ಮ ಅಧಿಕಾರಿಗಳ ಹತ್ತಿರ ಹೋಗಿ ರಿಟರ್ನ್ಸ್ ಕೊಡುವುದು. ಮತ್ತು ಲೆಕ್ಕ ಪತ್ರಗಳನ್ನು ಕೊಡುವುದು ತಪ್ಪುತ್ತಿತ್ತು. ಇಲ್ಲಪ್ಪ, ವರ್ಷಕ್ಕೆ ಇಷ್ಟು ಕೊಟ್ಟು ಬಿಡುತ್ತಿದ್ದೇವೆ ಎಂದು ಕಾನೂನು ಪ್ರಕಾರ ಮಾರಾಟ ತೆರಿಗೆಯನ್ನು ಕೊಡುವಾಗ ಯಾವ ಒಂದು ಕಾನೂನು, ನಿಯಮವನ್ನು ಅನುಸರಿಸುತ್ತಿದ್ದರೋ, ಅಂಥಾದ್ದೇ ಒಂದು ಅವಕಾಶವನ್ನು ಇಲ್ಲಿ ಕಲ್ಪಿಸಿಕೊಡಲಿಕ್ಕೋಸ್ಕರ ಈ ಒಂದು ಪ್ರಕರಣವನ್ನು ಉಳಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ನನ್ನ ಭಾವನೆ. ಅದನ್ನು ಹೊರತುಪಡಿಸಿ ಇನ್ನು ಉಳಿದಂಥ ಕಾನ್ಸಿಕ್ವೆನ್ಷಿಯಲ್ ಚೇಂಜಸ್ ಎಂದು ತಾವು ಹೇಳಿದಿರಿ, ಅಂತಹ ತಿದ್ದುಪಡಿಗಳಿಗೆ ನಮ್ಮ ವಿರೋಧ ಇಲ್ಲ ಎನ್ನುವ ಮಾತನ್ನು ಹೇಳುತ್ತಾ, ಇದರ ಬಗ್ಗೆ ಮಾನ್ಯ ಸಚಿವರ ಮತ್ತು ಸರ್ಕಾರದ ಅಭಿಪ್ರಾಯವನ್ನು ಸದನಕ್ಕೆ ತಿಳಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ 72 ವಸ್ತುಗಳಿಗೆ ಪ್ರವೇಶ ತೆರಿಗೆಯನ್ನು ರದ್ದು ಮಾಡಿದ್ದರಿಂದ, ಈ ಕಾಂಪೊಸಿಷನ್ ಸ್ಕೀಮ್ ಮಾಡುವುದರಿಂದ, ಅನೇಕ ಕೇಸುಗಳು ಪೆಂಡಿಂಗ್ ಏನಿವೆ, ಅವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಅಧಿಕಾರ ಬರುತ್ತದೆ. 8 ವಸ್ತುಗಳಿಗೆ ಎಕ್ಷಮ್ಷನ್ ಏನಿದೆ ಅದರಲ್ಲಿ ಹಿಂದೆ 5 ವಸ್ತುಗಳಿಗೆ ಕಾಂಪೊಸಿಷನ್ ಬೇಕಿರಲಿಲ್ಲ. ಇನ್ನು ಮೂರು ವಸ್ತುಗಳು. ಉದಾಹರಣೆಗೆ ಮೆಷಿನರಿ, ರಾಮೆಟೀರಿಯಲ್ಸ್ ಇಂಥ ವಸ್ತುಗಳು ಡೈರೆಕ್ಟ್ ಆಗಿ ಇಂಪೋರ್ಟ್ ಏನು ಮಾಡಿಕೊಳ್ಳುತ್ತಾರೆ. ಅದಕ್ಕೆಲ್ಲಾ ಕಾಂಪೊಸಿಷನ್ ಸ್ಕೀಮ್ ಅಪ್ಲೈ ಆಗುವುದಿಲ್ಲ.

ಶ್ರೀ ಹೆಚ್. ವಿಶ್ವಾನಾಥಯ್ಯ : ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಈ ಪ್ರಕರಣ ಇರುವುದರಿಂದ, ನಿಮಗೆ ಆಗತಕ್ಕ ನಷ್ಟ ಏನು, ಒಂದು ಪಕ್ಷ ಮುಂದೆ ಯಾರೇ ಅಧಿಕಾರಕ್ಕೆ ಬಂದರೂ ಸಹ ಯಾವುದಾದರೂ ಒಂದು ಸರಕಿನ ಮೇಲೆ ಪ್ರವೇಶ ತೆರಿಗೆಯನ್ನು ಹಾಕತಕ್ಕ ಸಂದರ್ಭದಲ್ಲಿ ಇಂತಹ ಒಂದು ವಿಧಿ ಇದ್ದರೆ, ಅದರ ವ್ಯಾಪ್ತಿಯಲ್ಲಿ ತಂದು ಅವನು ಕಾಂಪೊಸಿಷನ್ ಆಫ್ ಟ್ಯಾಕ್ಸ್ ಕಟ್ಟುತ್ತಾ ಇದ್ದ. ನಿಮಗೆ ಆದಂಥ ನಷ್ಟ ಏನು, ಏತಕ್ಕೋಸ್ಕರ ಈ ಪ್ರಕರಣವನ್ನು ರದ್ದು ಮಾಡುತ್ತಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಈ ಕಾಂಪೊಸಿಷನ್ ಅನ್ನುವುದು, it is not a tax that is due on the turnover. ಹೆಚ್ಚಿಗೆ ಅಲ್ಲ, ಈ ಒಂದು ವಿಧೇಯಕದ ಭಾಗ ಇರುವುದರಿಂದ, ಇಲಾಖೆಯವರಿಗೆ ಅನೇಕ ಕೇಸುಗಳು ಪೆಂಡಿಂಗ್ ಏನಿವೆ ಅವನ್ನು ವಿತ್ಡ್ರಾ ಮಾಡಿಕೊಳ್ಳಲಿಕ್ಕೆ ಅವಕಾಶ ಇರುತ್ತದೆ, ಇದರಿಂದ ತೊಂದರೆ ಏನಿಲ್ಲ. ವ್ಯಾಪಾರಸ್ಥರಿಗೂ ತೊಂದರೆ ಇಲ್ಲ, ಸರ್ಕಾರಕ್ಕೂ ವಿಶೇಷ ಅಧಿಕಾರ ಬರುವುದಿಲ್ಲ. ಆದ್ದರಿಂದ, ಇದನ್ನು ಒಪ್ಪಿಕೊಳ್ಳಬಹುದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಬಂಡಬಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ಮತ್ತು 3ಈ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ 1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೆ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಮೂರನೆ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಉಪಾಧ್ಯಕ್ಷರು : ಈಗ ಸದನ ಮುಂದುವರೆದು ಮತ್ತೆ ಬರುವ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸದನವು 1 ಗಂಟೆ 25 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 14ನೇ ಫೆಬ್ರುವರಿ ಮಾಹೆ 1994ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)